**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.</u>**

***<u>ಸಿ.ಸಿ. ನಂ.716/2025</u>***

***<u>ಪಿರ್ಯಾಧಿದಾರರುಃ</u>*** M/s ಧೀಮಂತ ಚಿಟ್ಸ್ ಪ್ರೈವೇಟ್ ಲಿಮಿಟೆಡ್, 1 ನೇ ಮಹಡಿ, ಸುವರ್ಣ ಕಾಂಪ್ಲೆಕ್ಸ್, ವಿನೋಭ ರಸ್ತೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಇದರ ಪರವಾಗಿ ಮೇಲ್ವಿಚಾರಕರು ಶ್ರೀ ಪ್ರಭಾಕರ ಕೆ.ವಿ. ಬಿನ್ ವೆಂಕಟರಮಣಯ್ಯ, 44 ವರ್ಷ.

**ವಿರುದ್ಧ**

***<u>ಆರೋಪಿಃ</u>*** ಶ್ರೀ ವಿಷ್ಣು ಹೆಚ್.ಜಿ., ಬಿನ್ ಗುಂಡಪ್ಪ ಹೆಚ್.ಡಿ., 41 ವರ್ಷ, 5 ನೇ ತಿರುವು, ವಿವೇಕಾನಂದ ರಸ್ತೆ, ಕೆಳಪೇಟೆ, ಕೊಪ್ಪ ಅಂಚೆ ಮತ್ತು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ-577126.

**<u>ಆಪಾದನೆ</u>**

ಆರೋಪಿಯಾದ ನೀವು ಪಿರ್ಯಾದುದಾರರ Chits under DCK078/08 ರ ಗುಂಪಿನ ಸದಸ್ಯರಾಗಿದ್ದು, ಚೀಟಿ ನಿಧಿ ನಿಯಮದ ಪ್ರಕಾರ ನೀವು ಬಾಕಿ ಕಂತುಗಳ ಮೊತ್ತ **ರೂ.1,95,000/-** ಹಣವನ್ನು ಪಾವತಿಸಬೇಕಾಗಿದ್ದು ಸದರಿ ಹಣದ ಬಾಬ್ತು ನೀವು **199492** ರ ಸಂಖ್ಯೆಯುಳ್ಳ **15.05.2025** ದಿನಾಂಕವನ್ನು ನಮೂದಿಸಿದ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ಅವರಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾಧಿದಾರರು ಬ್ಯಾಂಕ್ ಆಪ್ ಬರೋಡಾ, ಕೊಪ್ಪ ಶಾಖೆಗೆ ಹಾಜರುಪಸಿದಾಗ "**ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ"** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 24.05.2025 ರಂತೆ ವಕೀಲರ ನೋಟೀಸು ನೀಡಿದ್ದು ಸದರಿ ನೋಟೀಸು ನಿಮಗೆ ದಿನಾಂಕ 26.05.2025 ರಂದು ಜಾರಿಯಾಗಿದಾಗ್ಯೂ ಸಹ ನೀವು ಸದರಿ ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ದಿನಾಂಕ 13.11.2025.

ಸಹಿ/-13.11.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.